ಓಂ ಶಾಂತಿ, ಬಾಪ್ ದಾದಾ, ಅವ್ಯಕ್ತ ಮುರಳಿ 10-06-1971

*ಸೇವೆಯ ಧರಣಿಯನ್ನು ತಯಾರು ಮಾಡುವ ಸಾಧನ ಸರ್ಚ್ ಲೈಟ್* (सेवा की धरनी तैयार करने का साधन-सर्चलाइट)

ಪ್ರತಿಯೊಬ್ಬರ ಮಸ್ತಕದಲ್ಲಿ ಯಾವ ಮೂರು ರೇಖೆಗಳನ್ನು ನೋಡುತ್ತಿದ್ದಾರೆ? ತಮ್ಮ ರೇಖೆಗಳು ಕಂಡುಬರುತ್ತವೆಯೇ? ತಂದೆಯ ಸ್ಮೃತಿಚಿಹ್ನೆಯ ಚಿತ್ರದಲ್ಲಿ ಸದಾ ಮೂರು ರೇಖೆಗಳನ್ನು ಅವಶ್ಯವಾಗಿ ತೋರಿಸುತ್ತಾರೆ. ಅದೇ ರೀತಿ ಪ್ರತಿಯೊಬ್ಬ ಸಾಲಿಗ್ರಾಮನ ಮಸ್ತಕದಲ್ಲಿ ಯಾವ ಮೂರು ರೇಖೆಗಳು ಕಂಡುಬರುತ್ತವೆ? ಮಸ್ತಕವನ್ನು ಎಂದಾದರೂ ದರ್ಪಣದಲ್ಲಿ ನೋಡಿರುವಿರಾ? ಯಾವ ದರ್ಪಣದಲ್ಲಿ ನೋಡಿರುವಿರಿ? ಪ್ರತಿಯೊಬ್ಬರ ಮಸ್ತಕದಲ್ಲಿ ಒಂದು ರೇಖೆ ಅಥವಾ ಚಿಹ್ನೆ ವಿಜಯದ ಗುರುತಾಗಿದೆ. ತ್ರಿಶೂಲ ವಿಜಯದ ಗುರುತಾಗಿದೆ. ತ್ರಿಶೂಲ ಮನ, ವಚನ, ಕರ್ಮ ಮೂರರಲ್ಲಿ ಸಫಲತೆಯ ಚಿಹ್ನೆ, ವಿಜಯದ ಚಿಹ್ನೆ. ಶಕ್ತಿಯರ ಚಿತ್ರಗಳಲ್ಲಿ ತ್ರಿಶೂಲವನ್ನು ತೋರಿಸುತ್ತಾರೆ. ಪ್ರತಿಯೊಬ್ಬರ ಮಸ್ತಕದಲ್ಲಿ ಈ ವಿಜಯದ ಗುರುತು ತ್ರಿಶೂಲವಾಗಿದೆ. ತ್ರಿಶೂಲದ ಮೇಲೆ ಎರಡನೆಯ ರೇಖೆ ಅಥವಾ ಗುರುತು ಬಿಂದುವಿನ ರೀತಿ ಇರುತ್ತದೆ. ಮೂರನೆಯ ರೇಖೆ ತ್ರಿಶೂಲದ ಕೆಳಗೆ ಉದ್ದವಾಗಿರುವದಾಗಿದೆ, ಅದು ದಾರಿ ಸ್ಪಷ್ಟ ಮತ್ತು ಎಚ್ಚರಿಕೆಯ ಚಿಹ್ನೆ. ಮಾರ್ಗದ ಮಧ್ಯದಲ್ಲಿ ಯಾವುದೇ ವಿಘ್ನಗಳು ಬರಲಾರದಂತೆ ಎಚ್ಚರಿಕೆ ಮತ್ತು ಸ್ಪಷ್ಟವಾಗಿರುವುದು. ಆದ್ದರಿಂದ ಮೂರನೆಯ ಗುರುತಾಗಿದೆ ನೇರ ಮಾರ್ಗದಲ್ಲಿ ಏಕರಸವಾಗಿ ನಡೆದಿರುವುದು. ಮೂರೂ ರೇಖೆಗಳು ಅಥವಾ ಗುರುತುಗಳನ್ನು ಪ್ರತಿಯೊಬ್ಬರ ಮಸ್ತಕದಲ್ಲಿ ನೋಡುತ್ತಿದ್ದರು. ಎಲ್ಲರಿಗೂ ರೇಖೆಗಳು ಇರುತ್ತವೆ. ಆದರೆ, ಕೆಲವರದು ಸ್ಪಷ್ಟವಾಗಿರುವುದಿಲ್ಲ, ಕೆಲವರದು ಸ್ಪಷ್ಟವಾಗಿರುತ್ತವೆ. ತಾವು ತಮ್ಮ ರೇಖೆಗಳನ್ನು ನೋಡಿರುವಿರಾ? ತ್ರಿಶೂಲವಿದೆ, ದಾರಿ ಸ್ಪಷ್ಟವಾಗಿದೆ ಮತ್ತು ಆತ್ಮಿಕ ಸ್ಥಿತಿಯ ಬಿಂದಿಯೂ ಇದೆ. ಭಕ್ತರು ಮಸ್ತಕದಲ್ಲಿ ತಿಲಕವನ್ನು ಇಟ್ಟುಕೊಳ್ಳುತ್ತಾರೆ. ತಾವು ಮಸ್ತಕದಲ್ಲಿ ಹಚ್ಚಿಕೊಳ್ಳುವ ಅವಶ್ಯಕತೆಯಿಲ್ಲ. ಸದಾ ತಮ್ಮ ಮಸ್ತಕದ ಈ ರೇಖೆಗಳಿಂದ ತಮ್ಮ ಸ್ಥಿತಿಯನ್ನು ಗುರುತಿಸಬಲ್ಲಿರಾ? ಮೂರೂ ರೇಖೆಗಳು ಸ್ಪಷ್ಟವಾಗಿರಬೇಕು ಆಗಲೇ ಸಾಕ್ಷಾತ್ಕಾರ ಮೂರ್ತಿ ಆಗಬಲ್ಲಿರಿ ಅಥವಾ ತಮ್ಮ ಕರ್ತವ್ಯವನ್ನು ಸಫಲ ಮಾಡಬಲ್ಲಿರಿ. ಈಗ ತಾವು ಸೇವೆಗೆ ಹೋಗುತ್ತಿರುವಿರಿ. ಈಗಿನಿಂದಲೇ ಆ ಆತ್ಮರ ಮೇಲೆ ಸರ್ಚಲೈಟ್ ಹಾಕಲು ಆರಂಭಿಸಿ. ಆರಂಭ ಮಾಡಿರುವಿರಾ ಅಥವಾ ಅಲ್ಲಿ ಹೋಗಿ ಮಾಡುವಿರಾ? ಸರ್ಚಲೈಟ್ ನ ಬೆಳಕು ಬಹಳ ದೂರದವರೆಗೆ ಹೋಗುತ್ತದೆ. ಆದ್ದರಿಂದ ಇಲ್ಲಿಂದಲೇ ಹಾಕಿ. ಆತ್ಮರನ್ನು ಆಯ್ಕೆ ಮಾಡಬಹುದು. ಇಲ್ಲಿಂದಲೇ ಕಾರ್ಯವನ್ನು ಆರಂಭಿಸಿದರೆ ಅಲ್ಲಿಗೆ ಹೋಗುತ್ತಲೇ ಪ್ರತ್ಯಕ್ಷ ಪ್ರಮಾಣ ಕಂಡುಬರುವುದು. ಸರ್ಚ್ ಲೈಟ್ ಆಗಿಯೇ ಓಡಾಡುತ್ತೀರೋ ಅಥವಾ ಕುಳಿತಾಗ ಸರ್ಚಲೈಟ್ ಆಗುತ್ತೀರೋ? ನಿರಂತರ ಸರ್ಚಲೈಟ್ ಎಂದು ತಿಳಿದು ನಾಲ್ಕೂ ಕಡೆಗಳಲ್ಲಿ ವಾಯುಮಂಡಲವನ್ನು ರೂಪಿಸುವ ಕರ್ತವ್ಯವನ್ನು ಈಗಿನಿಂದಲೇ ಮಾಡಿ. ಆಗ ಅಲ್ಲಿಗೆ ಹೋಗುತ್ತಲೇ ವಾಯುಮಂಡಲದ ಆಕರ್ಷಣೆಯಿಂದ ಸಮೀಪ ಬರುವಂತಹ ಆತ್ಮರು ತಮ್ಮ ಸಹಜ ಭಾಗ್ಯವನ್ನು ಪಡೆಯಬಹುದು ಏಕೆಂದರೆ ಈಗ ಸಮಯ ಕಡಿಮೆ ಮತ್ತು ಸಫಲತೆ ಸಾವಿರ ಪಟ್ಟು ತೋರಿಸಬೇಕು. ಮೊದಲಿನ ಸಮಯ ಬೇರೆಯಾಗಿತ್ತು. ಸಮಯ ಜಾಸ್ತಿ ಮತ್ತು ಸಫಲತೆ ಕಡಿಮೆಯಿರುತ್ತಿತ್ತು. ಆದರೆ ಈಗ ಕಡಿಮೆ ಸಮಯದಲ್ಲಿ ಸಾವಿರ ಪಟ್ಟು ಸಫಲತೆ ಸಿಗುವಂತಹ ಯೋಜನೆ ಮಾಡಿ. ಯೋಜನೆಗೆ ಮೊದಲು ಪ್ಲೇನ್(ಸರಳವಾಗಿ) ತಯಾರಾಗಿ. ಆಗ ಯೋಜನೆ ಖಚಿತವಾಗಿ ಪ್ರತ್ಯಕ್ಷ ವಾಗುತ್ತದೆ. ಪ್ಲೇನ್ ಆದ ಮೇಲೆ ಸದಾ ಸಫಲತೆಗೆ ಯಾವ ಯೋಜನೆ ಮಾಡುವಿರಿ? ಎಂದಿಗೂ ಮರೆಯದಂತೆ ಸ್ವಲ್ಪದರಲ್ಲಿಯೇ ಹೇಳುತ್ತೇವೆ. ಮೊದಲನೆಯ ಮಾತು - ನಾವೆಲ್ಲರೂ ಒಂದು ಮತದವರು ಎಂದರೆ ಒಂದೇ ಮತದಂತೆ ಒಂದೇ ಮತಿ. ಎರಡನೆಯ ಮಾತು - ವಾಣಿಯಲ್ಲಿಯೂ ಸದಾ ಒಬ್ಬನ ಹೆಸರು ಬಾರಿ ಬಾರಿ ತಮಗೆ ಅಥವಾ ಬೇರೆಯವರಿಗೆ ಸ್ಮೃತಿಯಲ್ಲಿ ತರುವುದು, ಮೂರನೆಯ ಮಾತು - ಚಲನೆ ಅಥವಾ ಕರ್ಮದಲ್ಲಿ ಉಳಿತಾಯ ಕೇವಲ ತನುವಿನಿಂದ ಮಾಡುವುದಲ್ಲ, ಆದರೆ ವಾಣಿಯಲ್ಲಿಯೂ, ಸಂಕಲ್ಪದಲ್ಲಿಯೂ, ಸಮಯದಲ್ಲಿಯೂ ಮಾಡುವುದು. ಚಲನೆಯಲ್ಲಿ ಈ ಎಲ್ಲವೂ ಬಂದವು. ಈ ಮೂರೂ ಮಾತುಗಳನ್ನು ಏಕಮತ,

ಎಕ್ ನಾಮಿ ಮತ್ತು ಎಕಾನಾಮಿ(ಉಳಿತಾಯ) ಈ ಮೂರೂ ಮಾತುಗಳನ್ನು ಸದಾ ಸ್ಮೃತಿಯಲ್ಲಿ ಇಟ್ಟುಕೊಂಡು ಮತ್ತೆ ಹೆಜ್ಜೆ ಇಡುವುದು ಅಥವಾ ಸಂಕಲ್ಪವನ್ನು ವಾಣಿಯಲ್ಲಿ ತರುವುದು.

ಯಾವುದೇ ಕೊಡು-ತೆಗೆದುಕೊಳ್ಳುವ ಸಮಯದಲ್ಲಿ ಒಂದು ಸ್ಲೋಗನ್ ನೆನಪಿಡಿ - ಬಾಲಕರೇ ಮಾಲಕರು, ಯಾವ ಸಮಯದಲ್ಲಿ ವಿಚಾರಗಳನ್ನು ಕೊಡುತ್ತೀರೋ ಆಗ ಮಾಲೀಕರಾಗಿ ಕೊಡಬೇಕು ಆದರೆ ನಿರ್ಣಯವಾಗುವ ಸಮಯ ಬಾಲಕರಾಗಿ, ಕೇವಲ ಮಾಲಿಕರಲ್ಲ, ಕೇವಲ ಬಾಲಕರಲ್ಲ. ಯಾವ ಸಮಯ ಯಾವ ಕರ್ಮ ಮಾಡಬೇಕೋ ಆ ಸಮಯ ಅದೇ ಸ್ಥಿತಿಯಿರಬೇಕು ಮತ್ತು ಯಾವಾಗ ಅನ್ಯ ಆತ್ಮರ ಸೇವೆ ಮಾಡುತ್ತೀರೋ ಆಗ ಅನ್ಯರ ಸೇವೆಯ ಜೊತೆಗೆ ತಮ್ಮ ಸೇವೆಯನ್ನೂ ಮಾಡಿಕೊಳ್ಳಬೇಕು ಎಂಬುದನ್ನು ನೆನಪಿಡಬೇಕು. ಆತ್ಮಿಕ ಸ್ಥಿತಿಯಲ್ಲಿ ತಮ್ಮನ್ನು ಸ್ಥಿತ ಮಾಡಿಕೊಳ್ಳುವುದೇ ತಮ್ಮ ಸೇವೆ. ತಮ್ಮ ಸೇವೆಯೂ ನಡೆಯುತ್ತಿದೆಯೇ ಎಂದು ಮೊದಲು ಪರಿಶೀಲನೆ ಮಾಡಿಕೊಳ್ಳಿ. ತಮ್ಮ ಸೇವೆಯಾಗದಿದ್ದರೆ ಬೇರೆಯವರ ಸೇವೆಯಲ್ಲಿ ಸಫಲತೆ ಸಿಗುವುದಿಲ್ಲ. ಆದ್ದರಿಂದ ತಂದೆಯ ನೆನಪು ಎಂದರೆ ತಮ್ಮ ನೆನಪು ಅಥವಾ ತಮ್ಮ ನೆನಪು ಎಂದರೆ ತಂದೆಯ ನೆನಪು ಎಂದು ಬೇರೆಯವರಿಗೆ ಹೇಳುತ್ತೀರಲ್ಲವೇ ಹಾಗೆಯೇ ಬೇರೆಯವರ ಸೇವೆ ಎಂದರೆ ತಮ್ಮ ಸೇವೆ, ಇದನ್ನೂ ಸ್ಮೃತಿಯಲ್ಲಿ ಇಟ್ಟುಕೊಳ್ಳಬೇಕು. ಯಾವುದೇ ಸೇವೆಗೆ ಹೋಗುವಾಗ ಸದಾ ಸೇವೆಯ ಜೊತೆಗೆ ತಮ್ಮ ಹಳೆಯ ಸಂಸ್ಕಾರಗಳ ಅಂತಿಮ ಸಂಸ್ಕಾರ ಮಾಡುತ್ತೇವೆ ಎಂದು ತಿಳಿದುಕೊಳ್ಳಿ. ಎಷ್ಟು ಸಂಸ್ಕಾರಗಳ ಅಂತಿಮಸಂಸ್ಕಾರವನ್ನು ಮಾಡುವಿರೋ ಅಷ್ಟು ಸತ್ಕಾರ ಸಿಗುವುದು. ಎಲ್ಲಾ ಆತ್ಮರು ತಮಗೆ ಮನದಿಂದ ನಮಸ್ಕಾರ ಮಾಡುವರು. ಒಂದಾಗಿದೆ ಕೈಗಳಿಂದ ನಮಸ್ಕಾರ ಮಾಡುವುದು, ಇನ್ನೊಂದು ಮನದಿಂದ ಮಾಡುವುದು. ಮನದಲ್ಲಿ ಗುಣ ಗಾಯನ ಮಾಡುವರು. ಭಕ್ತಿಯನ್ನು ಸಹ 1. ತೋರಿಕೆಗೆ ಮಾಡುವುದು 2. ಮನಸ್ಸಿನಿಂದ ಮಾಡುವುದು. ತೋರಿಕೆಗೆ ನಮಸ್ಕಾರ ಮಾಡುವುದು ದೊಡ್ಡ ಮಾತೇನಲ್ಲ ಆದರೆ ಮನಸ್ಸಿನಿಂದ ನಮಸ್ಕಾರ ಮಾಡುವುದು, ಇವರನ್ನು ಈ ರೀತಿ ಮಾಡಿದವರು ಯಾರು ಎಂದು ತಂದೆಯ ಗುಣ ಗಾಯನ ಮಾಡುವುದು. ಎರಡನೆಯದು ತಮ್ಮ ಧೃಡ ವಿಚಾರಗಳನ್ನು ತಮ್ಮಿಂದ ಕೇಳಿದ ಶ್ರೇಷ್ಠ ವಿಚಾರಗಳ ಮುಂದೆ ಬಾಗಿಸುವುದು ಇದು ಸಹ ನಮಸ್ಕಾರವಾಯಿತಲ್ಲವೇ? ಮನಸ್ಸಿನಿಂದ ನಮಸ್ಕಾರ ಮಾಡಲಿ ಎಂದು ಪುರುಷಾರ್ಥ ಮಾಡಿ, ಹೊರಗಿನ ಭಕ್ತರನ್ನು ತಯಾರು ಮಾಡಬೇಡಿ ಆದರೆ ಮಾನಸಿಕ ನಮಸ್ಕಾರ ಮಾಡುವಂತಹವರನ್ನು ಮಾಡಿ. ಅದೇ ಭಕ್ತರು ಬದಲಾಗಿ ಜ್ಞಾನಿಗಳಾಗುವರು, ಬುದ್ಧಿಯನ್ನು ಸದಾ ಎಷ್ಟು ಸ್ವಚ್ಛ ಎಂದರೆ ಒಬ್ಬನ ನೆನಪಿನಲ್ಲಿ ಅರ್ಪಣೆ ಮಾಡುವಿರೋ ಅಷ್ಟು ಸ್ವಯಂ ದರ್ಪಣವಾಗುವಿರಿ. ದರ್ಪಣದ ಎದುರಿಗೆ ಬರುವಾಗ ಇಚ್ಛೆಯಿಲ್ಲದಿದ್ದರೂ ತಮ್ಮ ಸ್ವರೂಪ ಕಂಡುಬರುವುದು. ಈ ರೀತಿ ಸದಾ ಒಬ್ಬನ ನೆನಪಿನಲ್ಲಿ ಬುದ್ಧಿಯನ್ನು ಅರ್ಪಣೆ ಮಾಡಿದರೆ ತಾವು ಚೈತನ್ಯ ದರ್ಪಣವಾಗುವಿರಿ. ಯಾರೇ ಎದುರಿಗೆ ಬಂದರೂ ಅವರು ತಮ್ಮ ಸಾಕ್ಷಾತ್ಕಾರವನ್ನು ಅಥವಾ ತಮ್ಮ ಸ್ವರೂಪವನ್ನು ಸಹಜ ಅನುಭವ ಮಾಡುವರು. ಆದ್ದರಿಂದ ದರ್ಪಣ ಆಗಬೇಕು, ಅದರಿಂದ ಸ್ವತಃ ಸಾಕ್ಷಾತ್ಕಾರವಾಗುವುದು. ಇದು ಚೆನ್ನಾಗಿದೆಯಲ್ಲವೇ? ಇದು 'ಸರ್ಚ್ ಲೈಟ್' ಎಂದು ದೂರದಿಂದಲೇ ಗೊತ್ತಾಗುವುದಲ್ಲವೇ? ಎಲ್ಲೇ ಇರಲಿ, ಎಷ್ಟೇ ದೊಡ್ಡ ಸಂಘಟನೆಯಿರಲಿ ಆದರೆ ಸಂಘಟನೆಯ ಮಧ್ಯದಲ್ಲಿ ದೂರದಿಂದಲೇ ಇವರು ಸರ್ಚ್ ಲೈಟ್ ಆಗಿದ್ದಾರೆ ಎಂದರೆ ಮಾರ್ಗ ತೋರಿಸುವವರಾಗಿದ್ದಾರೆ ಎಂದು ಗೊತ್ತಾಗಬೇಕು. ತಾವು ಜ್ಞಾನ ಮತ್ತು ನೆನಪಿನ ಸರ್ಚ್ ಲೈಟ್ ನಿಂದ ಮಾರ್ಗ ತೋರಿಸುವ ಸರ್ಚ್ ಲೈಟ್ ಆಗಿದ್ದೀರಿ ಮತ್ತು ದೃಡ ಸಂಕಲ್ಪ ಮಾಡಿ ಹೋದಾಗ ಸ್ವರೂಪ ಆಗುತ್ತೀರಿ. ನಾವು ವಿಜಯಿರತ್ನವಾಗಿದ್ದೇವೆ ಎಂಬ ಸಂಕಲ್ಪವಿದ್ದರೆ ಆಗ ಸ್ವರೂಪವೂ ವಿಜಯದ್ದೇ ಆಗುವುದು. ವಾಣಿ ಮತ್ತು ಕರ್ಮಗಳು ಸಹ ಇದೇ ರೀತಿ ಆಗುವವು, ಸಂಕಲ್ಪದ ಆಧಾರದಿಂದ ವಿಜಯ ಕರ್ಮದಲ್ಲಿ ತುಂಬಿದೆ. ವಿಜಯದ ತಿಲಕ ಸೇವಾಧಾರಿ ಆತ್ಮರಿಗೆ ಹಚ್ಚಲಾಗಿದೆ. ಸೇವೆ ಎಂದರೆ ವಿಜಯದ ತಿಲಕ ಹಚ್ಚಲಾಗಿದೆ. ಈ ಸೇವಾಧಾರಿ ಗುಂಪು ಹೋಗುತ್ತಿದೆ. ಯಾರ ಒಂದು ಕ್ಷಣ ಅಥವಾ ಒಂದು ಸಂಕಲ್ಪವೂ ಸೇವೆಯಿಲ್ಲದೆ ಇರುವುದಿಲ್ಲವೋ ಅವರಾಗಿದ್ದಾರೆ ಸೇವಾಧಾರಿ. ಈ ರೀತಿ ಈ ಗುಂಪಿದೆಯಲ್ಲವೇ? ವಿಶೇಷ ಸೇವೆಗಾಗಿ ಹೋಗುವಾಗ ತಮ್ಮ ಮೇಲೆ ವಿಶೇಷ ಗಮನವಿಟ್ಟುಕೊಳ್ಳಬೇಕು. ಇದು ಸಾಧಾರಣ ಸೇವೆಯಲ್ಲ ಆದರೆ ವಿಶೇಷ ಸೇವೆಯಾಗಿದೆ. ಸಾಧಾರಣ ಸೇವೆ ಮಾಡುವಾಗ ಸಾಧಾರಣ ಸ್ಮೃತಿಯಿರುತ್ತದೆ. ಯಾವುದೇ ವಿಶೇಷ

ಕಾರ್ಯ ಮಾಡಬೇಕಾದಾಗ ವಿಶೇಷ ನೆನಪಿರುತ್ತದೆ. ಸಾಧಾರಣ ಸ್ಮೃತಿಯಲ್ಲಿ ಅಲ್ಲ ಆದರೆ ಶಕ್ತಿಶಾಲಿ ಸ್ಮೃತಿಯಲ್ಲಿರಬೇಕು. ಸದಾ ಶಕ್ತಿಶಾಲಿ ಸ್ಮೃತಿಯಲ್ಲಿರುವುದರಿಂದ ವಾಯುಮಂಡಲ ಶಕ್ತಿಶಾಲಿಯಾಗಿರುವುದು. ಶಕ್ತಿಶಾಲಿ ವಾಯುಮಂಡಲವಾಗುವುದರಿಂದ ಯಾವುದೇ ಆತ್ಮ ಆ ವಾಯುಮಂಡಲದಿಂದ ಹೋಗಲಾರದು. ಆಗಲೇ ಸೇವೆಯ ಸಫಲತೆಯಾಗುವುದು. ಸದಾ ಪರಸ್ಪರರ ವಿಚಾರಗಳಿಗೆ ಮನ್ನಣೆ ಕೊಟ್ಟು ಸ್ವೀಕಾರ ಮಾಡಿ. ಆಗ ಮನಸ್ಸಿನಿಂದ ನಮಸ್ಕಾರ ಸಹಜವಾಗಿ ಮಾಡುವರು. ಸದಾ "ಆಗಲಿ" ಎಂಬ ಪಾಠ ಪಕ್ಕಾ ಮಾಡಿಕೊಳ್ಳಿ. ಎಷ್ಟು ಈ ಪಾಠವನ್ನು ಪಕ್ಕಾ ಮಾಡಿಕೊಳ್ಳುವಿರೋ ಅಷ್ಟು ಜೈಜೈಕಾರವಾಗುವುದು. ತಾವು ತಮ್ಮ ಶಕ್ತಿ-ಸ್ವರೂಪದ ಅಥವಾ ಪಾಂಡವ ಸ್ವರೂಪದ ಪ್ರತ್ಯಕ್ಷತೆಯನ್ನು ಮಾಡಲು ಹೋಗುತ್ತಿರುವಿರಲ್ಲವೇ? ಕುದುರೆ ಚಕ್ರ ಸುತ್ತಿ ಅರ್ಥಾಥ್ ಆತ್ಮರನ್ನು ಯಜ್ಞದಲ್ಲಿ ಸ್ವಾಹಾ ಮಾಡಿಸಲು ಹೋಗುತ್ತಿರುವಿರಿ. ಸ್ವಯಂ ಸ್ವಾಹಾ ಆಗಿರುವಿರಿ. ಪ್ಲೇನ್ ಆಗಿ ಜೊತೆಗೆ ಭಾರವನ್ನು ತೆಗೆದುಕೊಳ್ಳಬೇಡಿ. ಪಾಂಡವರು ಐವರು ಆದರೆ ಮತ ಒಂದು ನಾವೆಲ್ಲರೂ ಒಂದು ಎಂದು ಹೇಳುತ್ತಾರಲ್ಲವೆ? ಒಂದರ ಉದಾಹರಣೆಗೆ ಇದು ಮೊದಲ ಗುಂಪು, ಪರಸ್ಪರರಿಗೆ ಸ್ಮೃತಿ-ಸ್ವರೂಪದ ಸ್ಮೃತಿಯನ್ನು ಪ್ರತಿ ಸಮಯ ಕೊಡುವುದರಿಂದ ಒಂದು ಮತವಾಗುವಿರಿ. ಪಂಚ ಪಾಂಡವರ ಏಕಮತದ ವಿಶೇಷತೆಯೂ ಇದೆ ಮತ್ತು ಪ್ರತಿಯೊಬ್ಬರದೂ ತಮ್ಮ ವಿಶೇಷತೆ ಇದೆ. ಪ್ರತಿಯೊಬ್ಬರ ವಿಶೇಷತೆ ಏನಿದೆ? ನಾಲ್ಕು ಬಂದೂಕುಧಾರಿಗಳ ಕಥೆಯನ್ನು ಹೇಳುತ್ತೀರಲ್ಲವೇ ಹಾಗೆ ಒಬ್ಬರಿನ್ನೊಬ್ಬರಿಗೆ ಹೊಂದಿಕೊಂಡು ಎಲ್ಲಾ ಕಾರ್ಯಗಳನ್ನು ಸಫಲ ಮಾಡಬೇಕು. ಪ್ರತಿಯೊಬ್ಬರೂ ತಮ್ಮ ಮೇಲೆ ವಿಶೇಷ ಕಾರ್ಯವನ್ನು ತೆಗೆದುಕೊಳ್ಳಿ, ಪ್ರತಿಯೊಬ್ಬರೂ ತಮ್ಮ ವಿಶೇಷ ಕಾರ್ಯದ ಜವಾಬ್ದಾರಿಯನ್ನು ಹೇಳಿ, ಸಂಘಟನೆಯಲ್ಲಿರುತ್ತಾ ತಮ್ಮ ವಿಶೇಷತೆಯ ಸಹಯೋಗ ಕೊಡುವುದರಿಂದ ಸಹಜವಾಗುವುದು.

ಒಬ್ಬೊಬ್ಬ ಪಾಂಡವ ಯಾವ ವಿಶೇಷತೆಯನ್ನು ತೋರಿಸುವಿರಿ? ಆತ್ಮನ ಸಂಬಂಧದಿಂದ ಎಲ್ಲರೂ ಪಾಂಡವರು ಮತ್ತು ಶಕ್ತಿಯರಾಗಿದ್ದೀರಿ. ತಮ್ಮ ವಿಶೇಷತೆ ತಿಳಿದಿದೆಯೇ? ತಮ್ಮ ಉತ್ಸಾಹ-ಉಲ್ಲಾಸ ಮತ್ತು ಏಕರಸ ಸ್ಥಿತಿ ಸದಾ ಇರಲಿ, ಯಾರು ಎಷ್ಟೇ ಯಾವುದೇ ಮಾತುಗಳಿಂದ ತಮ್ಮನ್ನು ಸೋಲಿಸಲು ಪ್ರಯತ್ನಪಟ್ಟರೂ, ಪ್ರಾಕ್ಟಿಕಲ್ ಅನುಭವೀ ಮೂರ್ತಿಯಾಗಿ ಅವರಿಗೆ ಆತ್ಮಿಕ ದೃಷ್ಟಿ ಮತ್ತು ಶಕ್ತಿಶಾಲಿ ಸ್ಥಿತಿಯಲ್ಲಿದ್ದು ಎರಡೂ ಶಬ್ದಗಳನ್ನು ಶಕ್ತಿಶಾಲಿಯಾಗಿ ಹೇಳಿದರೆ ಅವರು ತಮ್ಮನ್ನು ತಾವು ಕಾಗದದ ಹುಲಿ ಎಂದು ತಿಳಿಯುವರು. ಎದುರಿಗೆ ರಾಕ್ಷಸ ವಿಕರಾಳ ರೂಪ ಧರಿಸಿ ಬರುತ್ತಾನೆ ಆದರೆ ದೇವಿಯರ ಮುಂದೆ ಪೂರ್ಣ ಪಶುವಿನಂತೆ ಎಂದರೆ ತಿಳಿಗೇಡಿಯಾಗುತ್ತಾನೆ ಎಂದು ತೋರಿಸುತ್ತಾರಲ್ಲವೇ? ಭಲೇ ತಮ್ಮ ಮುಂದೆ ಎಷ್ಟೇ ರೂಪಧಾರಣೆ ಮಾಡುವ ಪ್ರಯತ್ನ ಮಾಡಲಿ, ಎಷ್ಟೇ ಬುದ್ಧಿವಂತನಾದರೂ ತಮ್ಮ ಅನುಭವೀಮೂರ್ತಿ ಮತ್ತು ಆತ್ಮಿಕ ದೃಷ್ಟಿಯ ಮುಂದೆ ಪೂರ್ಣ ತಿಳುವಳಿಕೆಯಿಲ್ಲದವರು ಎಂದು ತಿಳಿಯುವರು. ಶಕ್ತಿಯರ ಪಾದದ ಕೆಳಗೆ ಸದಾ ಕೋಣವನ್ನು ತೋರಿಸುತ್ತಾರೆ, ಏಕೆ? ಯಾರು ಎಷ್ಟೇ ತಮ್ಮನ್ನು ಬುದ್ಧಿವಂತರು, ಜ್ಞಾನಸಂಪನ್ನರು ಎಂದು ತಿಳಿದರೂ ಕೋಣದ ಹಾಗೆ ತಿಳುವಳಿಕೆಯಿಲ್ಲದಿರುವಂತೆ ಒಂದು ರೂಪ ತೆಗೆದುಕೊಂಡು ಬರುವರು ಮತ್ತು ಇನ್ನೊಂದು ಪಡೆಯುವರು. ಶಕ್ತಿಯರ ಸ್ಮೃತಿಚಿಹ್ನೆ ತೋರಿಸುತ್ತಾರೆಯಲ್ಲವೇ? ಅಸುರ ಎದುರಿಸಲು ವಿಕರಾಳ ರೂಪ ಧರಿಸಿ ಬರುತ್ತಾನೆ ಆದರೆ ಶಕ್ತಿಯರ ಬಾಣ ತಾಗಿದಾಗ ಮತ್ತೊಂದು ರೂಪವನ್ನು ಪಡೆಯುತ್ತಾನೆ. ಆದ್ದರಿಂದ ಸದಾ ನಾವು ಸರ್ವ ಶಕ್ತಿವಂತನಿಂದ ನಿಮಿತ್ತರಾಗಲ್ಪಟ್ಟವರು ಎಂಬುದನ್ನು ನೆನಪಿಟ್ಟುಕೊಳ್ಳಬೇಕು. ಸರ್ವಶಕ್ತಿವಂತನ ಸರಕಾರದ ಸಂದೇಶಿಗಳಾಗಿದ್ದೀರಿ. ಯಾರೊಂದಿಗೂ ವಾರ್ತಾಲಾಪದಲ್ಲಿ ಮನಸ್ಸನ್ನು ಕಲುಷಿತಗೊಳಿಸಿಕೊಳ್ಳಬೇಡಿ ಏಕೆಂದರೆ ವಿಜ್ಞಾನದ ಶಕ್ತಿಯಿಂದ ಸಂಕಲ್ಪಗಳನ್ನು ಓದುತ್ತಾರೆ. ಆದ್ದರಿಂದ ಎಂದಿಗೂ ಯಾವುದೇ ಮಾತಿನ ಧ್ವನಿಯಾದರೆ ತಮ್ಮನ್ನು ಡಿಸ್ಟರ್ಬ್ ಮಾಡಿಕೊಳ್ಳಬೇಡಿ. ತಮ್ಮ ಮುಖದಲ್ಲಾಗಲಿ ಅಥವಾ ಮನಸ್ಸಿನ ಸ್ಥಿತಿಯಲ್ಲಾಗಲಿ ಅಂತರ ತರಬೇಡಿ, ಮಂತ್ರವನ್ನು ನೆನಪಿಟ್ಟುಕೊಳ್ಳಿ. ಯಾರಾದರೂ ಮಾತಿನಿಂದ ಅಥವಾ ಇನ್ನುಳಿದ ಯಾವುದೇ ರೀತಿಯಿಂದ ವಶಕ್ಕೆ ಬರದಿದ್ದರೆ ಮಂತ್ರ-ತಂತ್ರಗಳನ್ನು ಪ್ರಯೋಗಿಸುತ್ತಾರೆ. ಇಂತಹ ಯಾವುದೇ ಮಾತು ಎದುರಿಗೆ ಬಂದಾಗ ತಮ್ಮ ಆತ್ಮಿಕ ದೃಷ್ಟಿಯ ನೇತ್ರ ಮತ್ತು ಮನ್ಮನಾಭವ ಮಂತ್ರದ ಪ್ರಯೋಗವನ್ನು ಮಾಡಿ, ಆಗ ಹುಲಿಯು ಕೋಣವಾಗುವುದು. ಜಾದೂ ಮಂತ್ರ ಬರುತ್ತದೆಯಲ್ಲವೇ? ಇಲ್ಲಿಂದಲೇ ಎಲ್ಲಾ ವಿಧಿಗಳು ಬಂದಿವೆ. ಮಂತ್ರ

ಹಾಕುವುದು, ರಿದ್ಧಿ-ಸಿದ್ಧಿ ಸಹ ಇಲ್ಲಿಂದಲೇ ಬಂದಿದೆ. ತಮ್ಮ ಆತ್ಮಿಕ ದೃಷ್ಟಿಯಿಂದ ತಮ್ಮ ಸಂಕಲ್ಪಗಳನ್ನು ಸಿದ್ಧ ಮಾಡಬಹುದು. ಅಲ್ಲಿದೆ ರಿದ್ಧಿ-ಸಿದ್ಧಿ ಆದರೆ ಇಲ್ಲಿದೆ ವಿಧಿಯಿಂದ ಸಿದ್ಧಿ. ಶಬ್ದಗಳ ಅಂತರವಿದೆ. ರಿದ್ಧಿ-ಸಿದ್ಧಿಯಾಗಿದೆ. ಅಲ್ಪಕಾಲಕ್ಕೆ ಆದರೆ ನೆನಪಿನ ವಿಧಿಯಿಂದ ಸಂಕಲ್ಪಗಳ ಮತ್ತು ಕರ್ಮಗಳ ಅವಿನಾಶಿ ಸಿದ್ಧಿಯಾಗಿದೆ. ಅವರು ರಿದ್ಧಿ-ಸಿದ್ಧಿಯನ್ನು ಉಪಯೋಗ ಮಾಡುತ್ತಾರೆ ಮತ್ತು ತಾವು ನೆನಪಿನ ವಿಧಿಯಿಂದ ಸಂಕಲ್ಪ ಮತ್ತು ಕರ್ಮಗಳ ಸಿದ್ಧಿಯನ್ನು ಪಡೆದುಕೊಳ್ಳುತ್ತೀರಿ. ಒಳ್ಳೆಯದು.

ಅವ್ಯಕ್ತ ಮುರಳಿ 10-06-1971.

***ಸೇವೆಯ ಧರಣಿಯನ್ನು ತಯಾರು ಮಾಡುವ ಸಾಧನ ಸರ್ಚ್ ಲೈಟ್***

ಆತ್ಮಿಕ ಸ್ಥಿತಿಯಲ್ಲಿದ್ದು ಮನನ ಚಿಂತನೆ ಮಾಡಬೇಕಾಗಿರುವ ಸಂಕಲ್ಪಗಳು.

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.**

ನಾನು ಆತ್ಮ ಪವಿತ್ರ ಸ್ವರೂಪ, ಶಿವ ಪರಮಾತ್ಮ ನನ್ನ ತಂದೆ.

1. ನಾನು ಮನ, ವಚನ, ಕರ್ಮದಲ್ಲಿ ಸಫಲತೆಯನ್ನು ಪಡೆದಿರುವ ತ್ರಿಶೂಲಧಾರಿ.

2. ನಾನು ನನ್ನ ಮಸ್ತಕದಲ್ಲಿ ಮೂರು ರೇಖೆಗಳನ್ನು (ಬಿಂದುವಿನ, ಲೈನ್ ಕ್ಲಿಯರಾಗಿರುವ, ನೇರ ಮಾರ್ಗದಲ್ಲಿ ಏಕರಸವಾಗಿ ನಡೆಯುವ) ಸ್ಪಷ್ಟವಾಗಿ ಇಟ್ಟುಕೊಂಡಿರುವ ಸಾಕ್ಷಾತ್ಕಾರ ಮೂರ್ತಿಯಾಗಿದ್ದೇನೆ.

3. ನಾನು ನಡೆದಾಡುವ ಸರ್ಚ್ ಲೈಟ್ ಆಗಿದ್ದೇನೆ & ನಾಲ್ಕು ದಿಕ್ಕಿನಲ್ಲಿ ವಾಯುಮಂಡಲವನ್ನು ತಯಾರು ಮಾಡುವ ನನ್ನ ಕರ್ತವ್ಯವನ್ನು ಸದಾ ನಿಭಾಯಿಸಿದ್ದೇನೆ.

4. ನಾನು ಕಡಿಮೆ ಸಮಯದಲ್ಲಿ ಸಾವಿರಪಟ್ಟು ಸಫಲತೆಯನ್ನು ಹೊಂದಿ, ವಾಯುಮಂಡಲವನ್ನು ತಯಾರಿಸಿ, ಅನೇಕಾತ್ಮರ ಭಾಗ್ಯವನ್ನು ತಯಾರು ಮಾಡಿದ್ದೇನೆ.

5. ನಾನು ಬುದ್ಧಿ ಲೈನನ್ನು ಸ್ಪಷ್ಟವಾಗಿ ಇಟ್ಟುಕೊಂಡು ಯೋಜನೆಯನ್ನು ಪ್ರತ್ಯಕ್ಷತೆಯಲ್ಲಿ ತಂದಿರುವ ಸಫಲತಾ ಮೂರ್ತಿ.

6. ನಾನು ಮನಸ್ಸಿನಲ್ಲಿ ಏಕನಾಮಿ (ಒಬ್ಬ ತಂದೆಯ ಹೊರತು ಮತ್ಯಾರೂ ಇಲ್ಲ) ಮತ್ತು ಕರ್ಮದಲ್ಲಿ ಎಕಾನಮಿ (ಉಳಿತಾಯ) ಯಾಗಿರುವ ಪುರುಷಾರ್ಥಿ.

7. ನಾನು ಬಾಲಕ ಮತ್ತು ಯಜಮಾನನ ಸ್ಥಿತಿಯನ್ನು ಸಮಯಕ್ಕೆ ತಕ್ಕಂತೆ ಧಾರಣೆ ಮಾಡಿದ್ದೇನೆ.ಯ(ಯೋಚಿಸುವಾಗ ಯಜಮಾನ, ನಿರ್ಣಯ ಮಾಡುವಾಗ ಬಾಲಕ)

8. ನಾನು ಸ್ವಸೇವೆಯೊಂದಿಗೆ ಇತರರ ಸೇವೆಯನ್ನು ಕೂಡ ಮಾಡುತ್ತಿದ್ದೇನೆ. ಸಫಲತೆ ನನ್ನ ಜನ್ಮಸಿದ್ಧ ಅಧಿಕಾರ.

9. ನಾನು ನನ್ನ ಹಳೆಯ ಸಂಸ್ಕಾರಗಳ ಅಂತಿಮ ಸಂಸ್ಕಾರವನ್ನು ಮಾಡಿ ಆತ್ಮರೆಲ್ಲರಿಂದ ಸತ್ಕಾರವನ್ನು ಪಡೆದಿದ್ದೇನೆ.

10. ನಾನು ಒಬ್ಬ ತಂದೆಯ ಸ್ಮೃತಿಯಲ್ಲಿ ಬುದ್ಧಿಯನ್ನು ಅರ್ಪಣೆ ಮಾಡಿ ಸರ್ಚ್ ಲೈಟ್ ನ ಹಾಗೆ ಇರುತ್ತಾ ದರ್ಪಣದಂತೆ ತಯಾರಾಗಿದ್ದೇನೆ.

11. ನಾನು ಜ್ಞಾನ, ಯೋಗ ಎಂಬ ಪ್ರಕಾಶ ಮತ್ತು ಶಕ್ತಿಯ ಮಾರ್ಗವನ್ನು ತೋರಿಸುವ ಸರ್ಚ್ ಲೈಟ್ ಆಗಿದ್ದೇನೆ.

12. ನಾನು ವಿಜಯೀ ರತ್ನ ಎಂಬ ದೃಢಸಂಕಲ್ಪವನ್ನು ಮಾಡಿ, ಸ್ವರೂಪವಾಗಿ, ಕರ್ಮದಲ್ಲಿ ವಿಜಯೀ ಆಗಿದ್ದೇನೆ .

13. ನಾನು ವಿಜಯ ತಿಲಕವನ್ನು ಧಾರಣೆ ಮಾಡಿದ್ದೇನೆ.

14. ನಾನು ವಿಶೇಷ ಸೇವಾಧಾರಿ ಮತ್ತು ಶಕ್ತಿಶಾಲಿ ಎಂಬ ಸ್ಮೃತಿಯಲ್ಲಿದ್ದು ವಾಯುಮಂಡಲವನ್ನು ಶಕ್ತಿಶಾಲಿಯಾಗಿ ತಯಾರು ಮಾಡಿ ಸೇವೆಯಲ್ಲಿ ಸಫಲತೆಯನ್ನು ಪಡೆದಿದ್ದೇನೆ.

15. ನಾನು ಸೇವೆಯಲ್ಲಿ ಪರಸ್ಪರರ ಆಲೋಚನೆಳಿಗೆ ಮನ್ನಣೆ(ಗೌರವ) ಕೊಟ್ಟು, "ಹಾಗೆಯೇ" ಎಂಬ ಪಾಠವನ್ನು ಪಕ್ಕಾ ಮಾಡಿಕೊಂಡು, ಎಲ್ಲರೊಂದಿಗೆ ಸ್ನೇಹದಿಂದ ಇರುತ್ತಾ, ಏಕರಸ ಸ್ಥಿತಿಯಲ್ಲಿ ಇರುತ್ತಾ ಪ್ರತಿ ಕಾರ್ಯವನ್ನು ಸಫಲ ಮಾಡಿದ್ದೇನೆ.

16. ನಾನು ಅನುಭವೀ ಮೂರ್ತಿಯಾಗಿ ಶಕ್ತಿಶಾಲಿ ಸ್ಥಿತಿಯಲ್ಲಿ ಇರುತ್ತಾ ಯಾರೇ ನನ್ನೆದುರಿಗೆ ಬಂದಾಗ ಆತ್ಮಿಕ ದೃಷ್ಟಿಯಿಂದ ಶಕ್ತಿಶಾಲಿಯಾಗಿ ತಯಾರು ಮಾಡಿದ್ದೇನೆ.

17. ನಾನು ಸರ್ವಶಕ್ತಿವಂತನಿಂದ ನಿಮಿತ್ತವಾಗಿರುವ ಸರ್ವಶಕ್ತಿವಂತ ಸರಕಾರದ ಸಂದೇಶವಾಹಕನು ಎಂದು ಸದಾ ಭಾವಿಸುತ್ತೇನೆ.